ಮಾಡಿ ಮುಗಿಸಬೇಕಾದ ಕೆಲಸಗಳು ತೆರೆಯ ಮೇಲೆ ಚಿತ್ರದಂತೆ ಓಡುತ್ತಿದ್ದವು. ಕಾಂಗ್ರೆಸ್ ಸಮಿತಿಗೆ ಬರೆದ ಹೊಸ ನಿರ್ಣಯಗಳನ್ನು ಇನ್ನೂ ತಿದ್ದಬೇಕಾಗಿದೆಯೇ ಎಂದು ನೋಡಬೇಕು. ದೆಹಲಿಯಲ್ಲಿ ಶಾಂತಿ ಮರಳುವುದರ ಬಗ್ಗೆ ಎಲ್ಲ ಮತದ ನಾಯಕರ ಬಳಿ ಮಾತನಾಡಬೇಕು. ಕಲಿಯುತ್ತಿರುವ ಬಂಗಾಳಿ ಭಾಷೆಯಲ್ಲಿ ಸೋದರತ್ವ ಎಂಬುದರ ಬಗ್ಗೆ ಒಂದೆರಡು ಸಾಲುಗಳನ್ನು ಬರೆಯಬೇಕು. ನೆಹರೂ, ಪಟೇಲ್ ಇಬ್ಬರ ನಡುವಿನ ಮನಸ್ತಾಪವನ್ನು ನಿವಾರಿಸಬೇಕು.

ಇಂದು ಯಾಕೆ ಪಟೇಲ್ ಜತೆ ಅಷ್ಟು ಸಮಯ ಮಾತನಾಡಿದೆ. ಐದು ಗಂಟೆಗೆ ಸರಿಯಾಗಿ ಪ್ರಾರ್ಥನೆ ಪ್ರಾರಂಭವಾಗಬೇಕು. ವಿಳಂಬವಾದದ್ದನ್ನು ಮನು, ಆಬಾ ಸಹ ತಿಳಿಸಲಿಲ್ಲವಲ್ಲ. ಹುಲ್ಲು ಹಾಸನ್ನು ದಾಟಿ ಪ್ರಾರ್ಥನೆಯ ಕಟ್ಟೆಯನ್ನು ತಲುಪಿದ್ದರೆ ಎಲ್ಲವೂ ಬದಲಾಗಿರುತ್ತಿದ್ದವೇನೋ? ಆದರೆ, ಇಂದು 'ದ ಲೈಫ್' ಪತ್ರಿಕೆಯ ಸಂದರ್ಶನದಲ್ಲಿ 'ನೀವು ಯಾವಾಗಲೂ, 125 ವರ್ಷದವರೆಗೆ ಬದುಕಲು ಬಯಸುವುದಾಗಿ ಹೇಳುತ್ತಿದ್ದೀರಿ. ಯಾವ ನಂಬಿಕೆಯಿಂದ ಹಾಗೆ ಹೇಳುತ್ತಿದ್ದೀರಿ?' ಎಂದು ಕೇಳಿದಾಗ, 'ಆ ನಂಬಿಕೆ ಈಗಿಲ್ಲ' ಎಂದು ಹೇಳಿದೆ. 'ಯಾಕೆ ಹಾಗೆ ಹೇಳುತ್ತೀರಿ?' ಎಂದು ಅವರು ಕೇಳಿದರು. ಅದಕ್ಕೆ ನಾನು 'ಜಗತ್ತಿನಲ್ಲಿ ನಡೆಯುವ ಭಯೋತ್ಪಾದನೆಯೇ ಕಾರಣ. ನಾನು ಕತ್ತಲಿನಲ್ಲಿ ಬದುಕಲು ಇಷ್ಟಪಡುವುದಿಲ್ಲ' ಎಂದು ಹೇಳಿದೆ. ಹೌದು, ನಾನು ಸತ್ಯ ಯಾವುದೆಂದು ನಂಬುತ್ತೇನೋ ಅದನ್ನೇ ಹೇಳಿದ್ದೆ. ನಾನು ಬದಲಾದ ಕಾಲಕ್ಕೆ ಅಧೀನವಾಗಿ ಹೋದೆ. ನನ್ನ ಕನ್ನಡಕವೂ, ಚಪ್ಪಲಿಯೂ ಚದುರಿ ಬಿದ್ದಿವೆ. ನನ್ನ ಎದೆಯ ಮೇಲೆ ಬೆಚ್ಚಗೆ ತೇವವಾದ ಏನೋ ಹರಿದಾಡುತ್ತಿದೆ. ಕಿಬ್ಬೊಟ್ಟೆ ಇದ್ದಂತೆಯೇ ಅನಿಸುತ್ತಿಲ್ಲ. ಹೌದು, ನನಗೆ ಗುಂಡು ಹೊಡೆಯಲಾಗಿದೆ. ಪಿಸ್ತೂಲ್ ಹಿಡಿದ ಆ ಯುವಕ ನನ್ನ ಮೇಲೆ ಗುಂಡು ಹಾರಿಸಿದ್ದಾನೆ. ಆದರೆ, ಆ ಯುವಕ ನಿರಪರಾಧಿ. ನನ್ನಿಂದ ಕೂಗಿ ಹೇಳಲು ಸಾಧ್ಯವಾಗಿದ್ದರೆ ಇದನ್ನು ನಾನು ಹೇಳಿರುತ್ತಿದ್ದೆ. ಕೊನೆಯದಾಗಿ ಈ ಜಗತ್ತನ್ನು ನೋಡುತ್ತಿದ್ದೇನೆ. ನನ್ನ ಕಣ್ಣಲ್ಲಿ ಇರುಳು ಮೂಡುತ್ತಿದೆ. ನನ್ನ ಸುತ್ತ ಅರಚಾಟಗಳೂ ಅಳುವ ದನಿಗಳೂ ಕೇಳಿಸುತ್ತಿವೆ. ನಾನು ಸಾವಿನ ರಸ್ತೆಯಲ್ಲಿ ಹೆಜ್ಜೆಯಿಡುವಾಗ ನೆಹರೂ ತಮ್ಮ ಕಾರ್ಯಾಲಯದಲ್ಲಿ ಇದ್ದಾರೆ, ಪಟೇಲ್ ಮನೆಗೆ ಹಿಂತಿರುಗುತ್ತಿದ್ದಾರೆ. ಮೌಂಟ್ ಬ್ಯಾಟನ್ ತನ್ನ ಮನೆಯಲ್ಲಿ ವಿರಾಮವಾಗಿ ಮಾತನಾಡುತಿದ್ದಾರೆ. ಮೀರಾಬೆನ್ ಹಿಮಾಲಯದ ಆಶ್ರಮದಲ್ಲಿದ್ದಾಳೆ.

"ಕಸ್ತೂರ್, ನೀನೆಲ್ಲಿರುವೆ?"

"ಬಾನಿನಲ್ಲಿ ಮೋಡವಾಗಿ ರಾಶಿಯಾಗಿದ್ದೇನೆ. ಇಲ್ಲ, ಇಲ್ಲ ಹೆಪ್ಪುಗಟ್ಟಿದ್ದೇನೆ" ಅವಳ ಮನಸ್ಸು ಹಣ್ಣಾಗಿತ್ತು.

"ಮೋಹನ್, ನಿಮ್ಮಿಂದ ಯಾರನ್ನೂ ದ್ವೇಷಿಸಲು ಸಾಧ್ಯವಿಲ್ಲ. ನೀವು ದಕ್ಷಿಣ ಆಫ್ರಿಕಾದಲ್ಲಿರುವಾಗಲೇ ಇದನ್ನೆಲ್ಲ ಕಲಿತಿದ್ದೀರಿ. ಬೋಯರ್‌ಗಳಿಗೆ ವಿರುದ್ಧವಾದ ಯುದ್ಧದಲ್ಲಿ ಬ್ರಿಟಿಷರಿಗೆ ಬೆಂಬಲವಾಗಿ, ಸ್ವಯಂಸೇವಕರನ್ನು ಸೇರಿಸಿ ಆಂಬುಲೆನ್ಸ್ ಸೇನೆಯನ್ನು ನಿರ್ಮಾಣ ಮಾಡಿದಿರಿ. ಸ್ವಯಂಸೇವಕರು ಮುಂದೆ ಬಂದದ್ದು ನಿಮ್ಮ ಮೇಲಿಟ್ಟಿದ್ದ ಗೌರವಕ್ಕಾಗಿ. ನೀವು ಅವರನ್ನು ಕರೆದದ್ದು ಬ್ರಿಟಿಷ್ ಸಾಮ್ರಾಜ್ಯದ ಮೇಲಿನ ನಿಮ್ಮ ಮರ್ಯಾದೆಯಿಂದ ಅಲ್ಲವೇ?"

"ಅವರಿಗೆ ಜಯ ದೊರಕಿದರೆ, ರಾಜಕೀಯ, ಶಿಕ್ಷಣ, ವ್ಯಾಪಾರ ಎಲ್ಲ ಕ್ಷೇತ್ರಗಳಲ್ಲೂ ನಮ್ಮ ಪ್ರಜೆಗಳಿಗೆ ಅವಕಾಶ ದೊರಕುತ್ತದೆ ಎಂಬ ಸ್ವಾರ್ಥವೂ ಸಹ" ಹೇಳಿ ಮುಗಿಸುವುದರೊಳಗೆ ಗುಂಡುಗಳು ದಿಕ್ಕಿಗೊಂದಾಗಿ ಸರಿಯುತ್ತಾ ದೇಹದ ತುಂಬ ನೋವುಂಟುಮಾಡಿದವು. ಇದು ಮರಣ. ಹೌದು, ಮರಣವೇ. ನಾನು ಈ ಭೂಮಿಯನ್ನು ಬಿಟ್ಟು ಹೋಗುತ್ತಿದ್ದೇನೆ. ಶೀಘ್ರದಲ್ಲೇ ಬೇರೆಲ್ಲಿಗೋ ಹೋಗಿಬಿಡುತ್ತೇನೆ. ಎಲ್ಲಿಗೆ?

ಕಸ್ತೂರ್ ತನಗೆ ನೀಡಿದ ಸಮಯವನ್ನು ಕಳೆದುಕೊಳ್ಳಲು ಬಯಸಲಿಲ್ಲ.